ಇನಿಸೊಗೆತರ್ಪ ಕಣ್ಬನಿಗಳಿಂದಮೆ ನೇಹಮನುಂಟು ಮಾಡುವಂ
ಗನೆಯರೊಳೇನಪಾರಭವಭೋಗಮನಿಂತಿರೆಪತ್ತುವಿಟ್ಟುಕಾ
ನನದೊಳೆ ನಟ್ಟುನಿಂದ ಸುಕುಮಾರಮೆನಿಪ್ಪ ಶರೀರಮಂ ಕಱು
ತ್ತಿನಿವಿರಿದೊಂದು ಘೋರತಪಕ್ಕೊಡ್ಡಿದೆ ನಿನ್ನವೊಲಾರ್ ಕೃತಜ್ಞೆಯರ್

ಬಹುಶಃ ಕವಿಯ ಆಶಯವೂ ಇದೇ ಆಗಿರಬೇಕು. ಭೋಗದ ಉತ್ಕಟತೆಯೇ ಸಂಯಮಶೀಲತ್ವವನ್ನು, ತ್ಯಾಗಶೀಲತೆಯನ್ನು ಕಲಿಸುತ್ತದೆ. ಒಂದಷ್ಟು ಕಣ್ಣೀರು ಸುರಿಸಿ ಸ್ನೇಹವನ್ನು ತೋರ್ಪಡಿಸಿಕೊಳ್ಳುವ ಹೆಂಗಸರಲ್ಲಿ ವಿಶೇಷವೇನಿದೆ? ಅಪಾರವಾದ ಸುಖಭೋಗಗಳನ್ನು ತೊರೆದು, ಕಾಡಿನಲ್ಲಿದ್ದುಕೊಂಡು, ಸುಕುಮಾರವಾದ ಶರೀರವನ್ನು ದಂಡಿಸಿ, ಕಠೋರವಾದ ತಪಸ್ಸಿಗೆ ಒಡ್ಡಿಕೊಂಡಿರುವೆ; ನಿನ್ನಂತೆ ಇನಿಯನಲ್ಲಿ ಕೃತಜ್ಞತೆಯುಳ್ಳ ಹೆಂಗಸರು ಯಾರಿದ್ದಾರೆ ಎಂದು ಚಂದ್ರಾಪೀಡ ಅವಳ ಸದ್ಗುಣಗಳನ್ನು ಕಂಡು ಗೌರವ ತೋರುತ್ತಾನೆ. ಸಹಗಮನವೆಂಬ ಅನಿಷ್ಟ ಪದ್ಧತಿಯ ಬಗ್ಗೆ ಕವಿ ಎತ್ತುವ ಪ್ರಶ್ನೆಗಳು ಅತ್ಯಂತ ಅರ್ಥಪೂರ್ಣ. ಬಾಣನಿಗೆ ಇದ್ದ ಅಸಾಮಾನ್ಯವಾದ ಲೋಕಾನುಭವಕ್ಕೆ ನಿದರ್ಶನವಾಗಿ ಈ ಪದ್ಯವನ್ನು ಉದಾಹರಿಸಬಹುದು:

ಸತ್ತಳೆಕಾಮದೇವನ ಪರೋಕ್ಷದೊಳಾರತಿ ಪಾಂಡು ಸತ್ತೊಡಂ
ಸತ್ತಳೆಕುಂತಿ ಮತ್ತಮಭಿಮನ್ಯು ಕುಮಾರನಂದು ಸತ್ತೊಡೇ
ನುತ್ತರೆ ಸತ್ತಳೇ ನೆಗಟ್ದ ಸಿಂಧು ನೃಪಾಲಕನಂದು ಸತ್ತೊಡಂ
ಸತ್ತಳೆ ದುಶ್ಶಳಾವನಿತೆಯಿಂತಿವು ನೀವರಿದಂದವಲ್ಲವೇ

'ಸತ್ತವರೇೞ್ವರೆಪೇೞಿಓಡಸತ್ತರೆ'—ಒಂದು ವೇಳೆ ಸಹಗಮನ ಮಾಡಿದರೆ ಸತ್ತವರು ಮೇಲೇಳುತ್ತಾರೆಯೇ? ಮೊದಲು ಸತ್ತವರೂ, ಅವರ ಜೊತೆಯಲ್ಲಿ ಸತ್ತವರೂ ಒಟ್ಟಿಗೆ ಸೇರುತ್ತಾರೆ ಎಂಬುದು ಅಸಂಬದ್ಧವಾದುದು. ಜೊತೆಯಲ್ಲಿ ಸತ್ತವರಿಗೆ ಆತ್ಮಹತ್ಯಾದೋಷ ಬರುತ್ತದೆ. ಸತ್ತವರ ಜೊತೆ ಸಾಯದೆ ಬದುಕಿದ್ದರೆ, ಅವರಿಗೆ ಜಲಾಂಜಲಿ/ ತರ್ಪಣವನ್ನಾದರೂ ಕೊಡಲು ಸಾಧ್ಯವಾದೀತು. ನಾಗವರ್ಮ 'ಯದೇತದನುಮರಣಂ ನಾಮತದತಿನಿಷ್ಫಲಂ' ಎಂಬ ಕಾದಂಬರಿಯ ಗದ್ಯಭಾಗವನ್ನು ಪದ್ಯಬಂಧಕ್ಕೆ ಹದವಾಗಿ ಅಳವಡಿಸಿ, ಸಾಧ್ಯವಾದಷ್ಟೂ ಸನ್ನಿವೇಶಗಳ ಅರ್ಥವಂತಿಕೆಯ ಕಡೆಗೆ ಹೆಚ್ಚು ಗಮನಹರಿಸಿದ್ದಾನೆ.



'ಕರ್ನಾಟಕ ಕಾದಂಬರಿ'ಯಲ್ಲಿ ಮಹಾಶ್ವೇತೆ—ಪುಂಡರೀಕರ ಕತೆ ಪ್ರಧಾನ ಭೂಮಿಕೆಯಲ್ಲಿದ್ದು, ಕಾದಂಬರಿಯ ಪಾತ್ರಪೋಷಣೆಗೆ ಹಿನ್ನೆಲೆಯನ್ನು ಒದಗಿಸಿದೆ. ಪುಂಡರೀಕನ ಶಾಪನಿಮಿತ್ತವಾಗಿ ಚಂದ್ರಾಪೀಡ ಜನಿಸಿ, ಬೇಟೆಯ ನೆಪದಲ್ಲಿ ಮಹಾಶ್ವೇತೆಯನ್ನು ಸಂಧಿಸದಿದ್ದರೆ ಆಕೆಯ ಪ್ರಣಯ ಚರಿತ್ರೆಯೇ ಆರಂಭವಾಗುತ್ತಿರಲಿಲ್ಲ. ಮಹಾಶ್ವೇತೆ – ಕಾದಂಬರಿ ಒಡನಾಡಿಗಳಾಗಿ ಬೆಳೆದವರು. ಚಿತ್ರರಥನೆಂಬ ಗಂಧರ್ವರಾಜನ ಪುತ್ರಿಯಾದ ಕಾದಂಬರಿ, ಮಹಾಶ್ವೇತೆ ಕೈಗೊಂಡ ವಿರಕ್ತಿಯನ್ನು ಕಂಡು, ತಾನೂ ಕನ್ಯಾವ್ರತವನ್ನು ಆಚರಿಸುವುದಾಗಿ ತಿಳಿಸಿ,